ತೆಗೆದುಕೊಳ್ಳಬೇಕೋ ಅದನ್ನೂ ತೆಗೆದುಕೊಂಡು ಜೊತೆಗೆ ಪರವಾನೆ ಇಲ್ಲದೆ, ಅನುಮತಿ ಇಲ್ಲದೆ ಓಡಾಡು ವಂಥಾ ಬಸ್ಸುಗಳ ಮೇಲೆ ಇನ್ನೂ ಕಠಿಣವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಅವಕಾಶ ಇದೆಯೋ ಆ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮಗೆ ಹೇಳಬೇಕಾದರೆ ಪ್ರೊಹಿಬಿಷನ್ ಇದ್ದಾಗ ಇಲ್ಲಿಸಿಟ್ ಲಿಕ್ಕರ್ ತಯಾರು ಮಾಡುವವರನ್ನು ಕಂಡುಹಿಡಿದು ಜೈಲಿಗೆ ಹಾಕುತ್ತಿದ್ದರು. ಆ ರೀತಿಯಾಗಿ ಸ್ಮಾಂಪಲ್ ಕೇಸಸ್ ಹಾಕಿ ಕೆಲವರ ಮೇಲೆ ಕೇಸಸ್ ಹಾಕುವುದು ಸರಿಯಲ್ಲ. ಇದರ ಬಗ್ಗೆ ಒಂದು ಬಿಗಿಯಾದ ಕ್ರಮ ತೆಗೆದುಕೊಂಡು ಇದರಲ್ಲಿ ಸರ್ಕಾರದ ನೀತಿಯೂ ಇರುವುದರಿಂದ ಇದನ್ನು ತಾವು ಸ್ಪಷ್ಟಪಡಿಸ ಬೇಕು. ಯೋಗ್ಯವಾದ ಪರವಾನೆ ಇಲ್ಲದೆ ಹಾಗೂ ಅನುಮತಿ ಇಲ್ಲದೆ ಓಡಾಡುವಂತ ಬಸ್ಸುಗಳ ಮೇಲೆ ಬಿಗಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಬಿಗಿಯಾದ ಕಾರ್ಯಕ್ರಮಗಳನ್ನು ಅಂಥಾವುಗಳ ಮೇಲೆ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸರ್ಕಾರ ಆದೇಶ ನೀಡಲಾಗಿದೆ.

Hemavathy Water to Sira, Madhugiri and C. N. Hally in Tumkur District.

521. SRI T. B. JAYACHANDRA (Kallambella).—Will the Chief Minister be pleased to state.—

(a) whether there is any standing rule either at the State or Central level that water from one river basin should not be made available for the another river basin ;

(b) whether there is any difficulty for the Government in giving Hemavathy Water to Sira, Madhugiri, and C. N. Hally talukas in Tumkur District ;

(c) whether Government is aware of the fact that Sira, Madhugiri and Pavagada are declared and recognised as drought hit areas and the taluks are being included under DPAR list maintained by Government of India ?

SRI R. GUNDU RAO (Chief Minister).—

(a) No.

(b) The Hemavathy project under execution does not envisage providing irrigation to Sira, Madhugiri and C. N. Hally taluks.

(c) Yes.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ನಾನು ಕೇಳಿದಂಥಾ ಈ ಒಂದು ಪ್ರಶ್ನೆಯಲ್ಲಿ ಉತ್ತರ ಏನು ಬಂದಿದೆ ಅನ್ನುವುದನ್ನು ನೋಡಿದರೆ (ಬಿ) ಪ್ರಶ್ನೆಗೆ ಉತ್ತರವಾಗಿ ಇಂಗ್ಲಿಷ್‌ನಲ್ಲಿ 'ನೋ' ಎಂದು ಉತ್ತರ ಇದೆ, ಕನ್ನಡದ ಪ್ರಶ್ನೆಯಲ್ಲಿ 'ಹೌದು' ಅಂತ ಉತ್ತರ ಇದೆ. ಆದರೆ ಹಿಂದಿನ ಸರ್ಕಾರ ಇದ್ದಾಗ ಈ ಬಗ್ಗೆ ನಾನು ಒಂದು ಪತ್ರ ಬರೆದಿದ್ದಕ್ಕೆ ಅವರು Diversion of water from Cauvery Basin to Krishna Basin is not possible ಅಂತ ಉತ್ತರ ಬರೆದಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಸದನದಲ್ಲಿ ಶಾಸಕರು ಕೇಳುವ ಪ್ರಶ್ನೆಗೆ ಒಂದು ತರಹ ಉತ್ತರ ಮತ್ತು ಶಾಸಕರಿಗೆ ಬರೆಯುವ ಪತ್ರದಲ್ಲೇ ಇನ್ನೊಂದು ತರಹ ಉತ್ತರ ಬರೆಯುವುದರಿಂದ ನನಗೆ ಇದರಲ್ಲಿ ಅನುಮಾನ ಬಂದಿರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದರಲ್ಲಿರುವ ನನ್ನ

ಸಿನೇ ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಿದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಚನ್ನಾಗಿ ಗೊತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಮಧುಗಿರಿ ಸಬ್ ಡಿವಿಷನ್ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿ ಜನರಿಗೆ ಕುಡಿಯಲು ನೀರು ಇಲ್ಲ ಎನ್ನುವುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿರುವುದರಿಂದ ಈ ಬಗ್ಗೆ ತಮ್ಮನ್ನು ಕೇಳುವುದು ಇಷ್ಟೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ತಾವು ಈ ಪ್ರಾಜೆಕ್ಟನ್ನು ಮಾಡಿಸಿದರೆ ಇದರಿಂದ ನಮ್ಮ ಮಧುಗಿರಿ ಸಬ್ ಡಿವಿಷನ್‌ಗೆ ನೀರು ಬರುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಇದರಲ್ಲಿ ಬಹಳ ಟೆಕ್ನಿಕಲ್ ಇದೆ ಅನ್ನುವುದು ಗೊತ್ತು. ನನಗೆ ಏನು ಅನುಮಾನ ಬಂದಿದೆ ಎಂದರೆ ಇದರಲ್ಲಿ ಯಾರು ರಾಜಕೀಯ ಪ್ರಭಾವಶಾಲಿಗಳಾಗಿದ್ದಾರೋ ಅವರ ಕಡೆಗೆ ಈ ನೀರು ಜಾಸ್ತಿ ಹರಿಯುತ್ತದೇ ವಿನಾ, ಅವರಿಗೆ ಹೆಚ್ಚು ಅನುಕೂಲವಾಗುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದಾರೆ ಅನ್ನುವ ಅನುಮಾನ ಇದೆ. ಆದುದರಿಂದ ನನ್ನ ಸಲಹೆ ಏನೆಂದರೆ ಹೆಚ್ಚು ನೀರು ಹರಿಯದೇ ಇರುವ ಕಡೆ ತಾವು ಗಮನಕೊಟ್ಟು ನಮ್ಮ ಕಡೆಯಲ್ಲಿರುವ ಜನರಿಗೂ ಈ ನೀರಿನ ಸೌಲಭ್ಯ ಸಿಗುವ ಹಾಗೆ ಒಂದು ವ್ಯವಸ್ಥೆ ಯನ್ನು ಮಾಡಿಕೊಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂದರೆ ಇದರಲ್ಲಿ ಪ್ರಭಾವ ಜಾಸ್ತಿ ಇರುತ್ತದೋ ಆ ಭಾಗದಲ್ಲಿ ಜಾಸ್ತಿ ನೀರು ಹರಿಯುತ್ತದೆ, ಯಾರದು ಪ್ರಭಾವ ಜಾಸ್ತಿ ಇಲ್ಲವೋ ಅಂಥಾ ಕಡೆ ಹೆಚ್ಚು ನೀರು ಹರಿಯುವುದಿಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ತಮಗೆ ಹೇಳಬೇಕಾದರೆ ಆ ಪ್ರಾಜೆಕ್ಟ್‌ನಿಂದ ಒಟ್ಟು ೬ ಸಾವಿರ ಎಕರೆಗೆ ಮಾತ್ರ ನೀರು ಬರುತ್ತದೇ ವಿನಾ ೭ ಸಾವಿರ ಎಕರೆಗೆ ನೀರು ಬರುವಂತೆ ಮಾಡುವುದಕ್ಕಾಗುವುದಿಲ್ಲ, ನನಗೆ ಗೊತ್ತಿದೆ. ಆದುದರಿಂದ ಆ ಪ್ರಾಜೆಕ್ಟ್‌ನಲ್ಲಿ ಎಷ್ಟು ನೀರು ದೊರೆಯುತ್ತದೋ ಅಷ್ಟರಲ್ಲೇ ಯಾವ ಯಾವ ಭಾಗಗಳಿಗೆ ಕೊಡ ಬಹುದೋ ಅಷ್ಟು ಭಾಗಗಳಿಗೆ ಕೊಡಬಹುದೇ ವಿನಾ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಒಂದು ವೇಳೆ ಆ ಪ್ರಾಜೆಕ್ಟ್‌ನಲ್ಲಿ ಹೆಚ್ಚು ನೀರು ದೊರಕುವುದಾದರೆ ನಿಮ್ಮ ಭಾಗಗಳಿಗೂ ಕೊಡೋಣ. ನನಗೆ ತಿಳಿದ ಮಟ್ಟಿಗೆ, ಸಿರಾ, ಮಧುಗಿರಿ ವಿಭಾಗಕ್ಕೆ ನೀರು ಕೊಡುವುದಕ್ಕೆ ಕಾವೇರಿ ಬೇಸಿನ್‌ನಿಂದಲೂ ಆಗುವುದಿಲ್ಲ, ಕೃಷ್ಣಾ ಬೇಸಿನ್‌ನಿಂದಲೂ ಆಗುವುದಿಲ್ಲ. ಇದನ್ನು ಡೈವರ್ಷನ್ ಮಾಡಿ ಭದ್ರಾ ಪ್ರಾಜೆಕ್ಟ್‌ನಿಂದ ಮಾತ್ರ ಕೊಡಬೇಕಾಗುತ್ತದೆ. ಆ ಪ್ರಾಜೆಕ್ಟ್ ಮಾಡುವುದಾದರೆ ಆದಕ್ಕೆ ಸಂಬಂಧಪಟ್ಟ ಭಾಗಗಳು ಯಾವ್ಯಾವುದು ಇವೆಯೋ ಅದಕ್ಕೆಲ್ಲಾ ಖಂಡಿತವಾಗಿಯೂ ನೀರು ಒದಗಿಸಿಕೊಡುವುದಕ್ಕೆ ಸಾಧ್ಯ ಉಂಟು. ಸರ್ಕಾರ ಈ ಪ್ರಾಜೆಕ್ಟನ್ನು ಮಾಡುವುದಕ್ಕೆ ಯಾವುದೇ ರೀತಿಯಾಗಿ ಹಿಂದುಮುಂದು ನೋಡುವುದಿಲ್ಲ. ಇದಕ್ಕೆ ಬೇಕಾಗಿರತಕ್ಕಂಥಾ ಹಣದ ಬಗ್ಗೆಯೂ ನಾವು ಹಿಂದೆ ಮುಂದೆ ನೋಡುವುದಿಲ್ಲ. ಏತಕ್ಕೆಂದರೆ ಯಾವ ಯಾವ ಭಾಗಗಳಿಗೆ ನೀರಿನ ಕೊರತೆ ಇದೆ ಅದನ್ನು ಹೋಗಲಾಡಿಸಬೇಕೆಂಬುದೇ ಸರ್ಕಾರದ ಒಂದು ನೀತಿ ಯಾಗಿದೆ. ಕಾವೇರಿ ಬೇಸಿನ್ ಆಗಲಿ, ಕಬಿನಿ ಪ್ರಾಜೆಕ್ಟ್ ಆಗಲಿ, ಭದ್ರಾ ಪ್ರಾಜೆಕ್ಟ್ ಆಗಲಿ ಈ ಕೆಲಸ ಗಳನ್ನು ತೆಗೆದುಕೊಂಡಾಗ ಆಯಾಯ ಭಾಗಗಳಿಗೆ ನೀರನ್ನು ಒದಗಿಸಿಕೊಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಕೆಲವು ಭಾಗಗಳಿಗೆ ನೀರನ್ನು ಕೊಡಬಾರದು ಎನ್ನುವ ಉದ್ದೇಶ ಏನೂ ಇಲ್ಲ. ಹೆಚ್ಚು ನೀರು ಬಂದರೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಕೊಡುತ್ತೇವೆ. ಕಾವೇರಿ ವ್ಯಾಲಿ ವಿಷಯವೇ ಬೇರೆ, ಕೃಷ್ಣಾ ವ್ಯಾಲಿ ವಿಷಯವೇ ಬೇರೆ. ಈಗ ಇರತಕ್ಕಂಥ ಭದ್ರಾ ಪ್ರಾಜೆಕ್ಟ್ ವಿಷಯ. ಅದನ್ನು ನಿಮ್ಮ ಭಾಗಕ್ಕೆ ಡೈವರ್ಷನ್ ಮಾಡುವ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಅದರ ಇನ್‌ವೆಸ್ಟಿಗೇಷನ್ ಮುಂಗಿದ ಮೇಲೆ ನಿಮ್ಮ ಭಾಗಕ್ಕೆ ನೀರು ಕೊಡಬೇಕಾಗುತ್ತದೆ. ಈ ಪ್ರಾಜೆಕ್ಟ್‌ನಿಂದ ನಿಮ್ಮ ಭಾಗಕ್ಕೆ ನೀರು ಕೊಡಬಾರದು ಅನ್ನುವ ಉದ್ದೇಶ ಏನೂ ನಮಗೆ ಇಲ್ಲ ಅನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ನಾನು ಇನ್ನು ಹೆಚ್ಚಿಗೆ ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿ ಗಳಿಗೆ ಬಿಟ್ಟ ವಿಷಯ. ನಾನು ಈಗ ಹೇಳುವುದು ಇಷ್ಟೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ ನೀರನ್ನು ಬೇಗನೆ ತರಿಸುತ್ತೇವೆ ಎಂದು ತಿಳಿಸಿದ್ದೀರಿ. ಅಲ್ಲದೆ ಇದನ್ನು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇರೆ ಸೇರಿಸಿದ್ದೀರಿ. ಈ ಕೆಲಸವನ್ನಾದರೂ ಕೂಡ ಆದಷ್ಟು ಜಾಗ್ರತೆ ಮುಂಗಿಸಿಕೊಡುವುದಾದರೆ ಈ ಭಾಗದಲ್ಲಿ ಬರತಕ್ಕಂಥಾ ನೀರನ್ನು ತುಮಕೂರಿಗೆ ಕೊಡುವುದರಲ್ಲೇ ಆಗಲಿ ಅಥವಾ ಮಂಡ್ಯದ ಭಾಗಕ್ಕೆ ಕೊಡುವುದರಲ್ಲೇ ಆಗಲಿ ನನಗೆ ಅಭ್ಯಂತರವಿಲ್ಲ. ಮಧುಗಿರಿ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿರು ವುದರಿಂದ ಈ ಭಾಗಗಳಿಗೆ ಯಾವ ಕಡೆಯಿಂದ ನೀರು ಒದಗಿಸಿಕೊಡಬೇಕೋ ಆ ಕಡೆಯಿಂದ ನೀರನ್ನು ಒದಗಿಸಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್.—ನಾನು ಮೊದಲೇ ಹೇಳಿದ ಹಾಗೆ ಕೃಷ್ಣಾ ಪ್ರಾಜೆಕ್ಟ್‌ನಿಂದ ಡೈವರ್ಷನ್ ಮಾಡಿ ಭದ್ರಾ ಪ್ರಾಜೆಕ್ಟ್‌ನಿಂದ ನಿಮ್ಮ ಭಾಗಕ್ಕೆ ನೀರು ಒದಗಿಸಿಕೊಡಲಂ ಇನ್‌ವೆಸ್ಟಿಗೇಷನ್ ಕೆಲಸ ಆಗುತ್ತಾ ಇದೆ. ಕೃಷ್ಣಾ ಪ್ರಾಜೆಕ್ಟ್‌ನಲ್ಲೂ ಹೆಚ್ಚು ನೀರು ಇದ್ದು ಕಾವೇರಿ ಬೇಸಿನ್‌ನಿಂದ ನೀರು ಒದಗಿಸುವುದಕ್ಕೆ ಏನೂ ತೊಂದರೆ ಇಲ್ಲದೇ ಇದ್ದರೆ ಅದರಲ್ಲೂ ಒದಗಿಸಿಕೊಡುತ್ತೇವೆ, ನಮ್ಮ ಅಭ್ಯಂತರ ಏನೂ ಇಲ್ಲ. ಈ ಕೆಲಸಗಳನ್ನೆಲ್ಲಾ ಆದಷ್ಟು ಜಾಗ್ರತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ಹಿಂದೆ ಮಾನ್ಯ ಸಚಿವರು ಶ್ರೀ ಬಸವಯ್ಯನವರು ಇದ್ದಾಗ ಸರ್ಕಾರದ ವತಿಯಿಂದಲೇ ಈ ಬಗ್ಗೆ ಒಂದು ಸಭೆ ಕರೆದು ಈ ವಿಷಯದಲ್ಲಿ ಕೂಲಂಕಷವಾಗಿ ಚರ್ಚೆ ನಡೆಸಿ, ಇದು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿಗೆ ಏನಾದರೂ ಮಾಡಿ ಈ ಕೆಲಸ ಮಾಡಿಕೊಡ ಬೇಕು ಎನ್ನುವ ಒಂದು ಕಾಳಜಿ ಮಾಡಿದ್ದರು ಆದುದರಿಂದ ನಾನು ಈವಾಗ ತಮ್ಮನ್ನು ಕೇಳುವುದು ಇಷ್ಟೆ, ಈ ಹೇಮಾವತಿ ನೀರು ಅಲ್ಲಿಗೆ ಬಂದರೆ ಇದರಿಂದ ೩ ತಾಲ್ಲೂಕುಗಳಿಗೆ ಬಹಳ ಅನುಕೂಲವಾಗುತ್ತದೆ. ಈ ಕೆಲಸವನ್ನಾದರೂ ಸರ್ಕಾರ ಮಾಡಿಕೊಡುತ್ತದೆ ಅನ್ನುವ ಒಂದು ಆಶ್ವಾಸನೆಯನ್ನು ಕೊಡುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಆ ಬಗ್ಗೆ ಉತ್ತರವನ್ನು ಮೊದಲೇ ಹೇಳಿದ್ದೇನೆ. I am very clear in that matter.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.

QUESTIONS FOR ANSWERS ON THE DAY
(but not taken up)

Decentralisation of Powers among Taluk Boards and Village Panchayats.

278. SRI M.C. BASAPPA (Chamarajanagar). —Will the Minister for Rural Development and Panchayat Raj be pleased to state:-

(a) whether it is a fact that the Government has taken a decision to decentralise power and give more powers to the Taluk Boards and Village Panchayats;

(b) if so, the steps taken by the Government in that direction ;

(c) whether necessary funds have been provided to these local bodies to take up this responsibility ?

SRI B. RAMAIAH. —(Minister for Rural Development and Panchayat Raj).—

(a) Yes.

(b) Government is actively reviewing it.

(c) Does not arise in view of reply furnished to 'b' above.